**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ- 31-15**

**(ಪ್ರಾ.ಸಾ. 9 ಚಾ.ಸಾ.-6)**

ತಾಃ 06-06-2018 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಗೋವಿಂದರಾಜು

ತಂದೆಯ ಹೆಸರು : ಕೆಂಪಯ್ಯ
ವಯಸ್ಸು : 48 ವರ್ಷ
ಉದ್ಯೋಗ : ಇಸ್ತ್ರಿ ಮಾಡುವುದು (ಐರ್‌ನಿಂಗ್)
ವಾಸ ಸ್ಥಳ : ಅಕ್ಕ ತಮ್ಮನಹಳ್ಳಿ , ದೊಡ್ಡಬಳ್ಳಾಪುರ ತಾಃ

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

ಈಗ ಸುಮಾರು 4-5 ವರ್ಷಗಳ ಹಿಂದೆ ದೊಡ್ಡಬೆಳವಂಗಲ ಪೋಲೀಸ್ ಠಾಣೆಗೆ ನನ್ನನ್ನು ಕರೆಯಿಸಿ ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದರು. ಈಗ ನನಗೆ ತೋರಿಸುತ್ತಿರುವ ನಿಪಿ 22 ನೋಡುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ. ನಿಪಿ 22 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 22(ಬಿ) ಎಂದು ಗುರುತಿಸಲಾಯಿತು.

ನಿಪಿ-22 ದಾಖಲೆಯಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲೀಸರು ಅದನ್ನು ನನಗೆ ಓದಿ ಹೇಳಿರಲಿಲ್ಲ. ಪೋಲೀಸರು ನನ್ನ ಸಮಕ್ಷಮ ಏನನ್ನೂ ಅಮಾನತ್ತುಪಡಿಸಿಕೊಂಡಿರುವುದಿಲ್ಲ ಹಾಗೂ ಆ ಕುರಿತು ಯಾವುದೇ ಮಹಜರ್ ಜರುಗಿಸಿಲ್ಲ. ನಿಪಿ 22 ಕ್ಕೆ ಸಹಿ ಮಾಡುವಾಗ ಪೋಲೀಸರು ನನಗೆ

ಯಾವುದೇ ವ್ಯಕ್ತಿಯನ್ನು ತೋರಿಸಿಲ್ಲ. ಈ ಕೇಸಿನ 2ನೇ ಆರೋಪಿ ಕೃಷ್ಣನನ್ನು ನಾನು ಪೋಲೀಸ್ ಠಾಣೆಯಲ್ಲಿ ನೋಡಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪರಿಶೀಲಿಸಲಾಯಿತು. ಸಕಾರಣಗಳು ಇರುವುದರಿಂದ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕ 24-02-2014 ರಂದು ದೊಡ್ಡಬೆಳವಂಗಲ ಪೋಲೀಸ್ ಠಾಣೆಗೆ ನನ್ನನ್ನು ಹಾಗೂ ಪ್ರಾಸಾ 6 ಚಂದ್ರಶೇಖರಯ್ಯನನ್ನು ಕರೆಯಿಸಿ ರಾಗ ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿ ಕೃಷ್ಣ ಈತನನ್ನು ಪೋಲೀಸರು ನಮಗೆ ತೋರಿಸಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿ ಬಳಿ ಇದ್ದ ಕೆಎ 05 3975 ಬಜಾಜ್ ಚೇತಕ್ ಸ್ಕೂಟರ್‌ನ್ನು, ವೀಲ್ ಸ್ಪಾನ್ , ಒಂದು ಚಾಕು , ಎರಡು ಕಬ್ಬಿಣದ ರಾಡುಗಳನ್ನು ನನ್ನ ಮತ್ತು ಪ್ರಾಸಾ 6 ರವರ ಸಮಕ್ಷಮ ಪೋಲೀಸರು ನಿಪಿ 22 ರಲ್ಲಿ ಕಾಣಿಸಿದಂತೆ ಮಹಜರ್ ಜರುಗಿಸಿ ತಮ್ಮ ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ನಿಪಿ 22 ಮಹಜರನ್ನು ಪೋಲೀಸರು ನನಗೆ ಓದಿ ಹೇಳಿದ ನಂತರ ಅದನ್ನು ತಿಳಿದುಕೊಂಡು ಅದಕ್ಕೆ ನನ್ನ ಸಹಿ ಮಾಡಿದ್ದೆನು ಎಂದರೆ ಸರಿಯಲ್ಲ. ನಾನು ಆರೋಪಿ ಕೃಷ್ಣನನ್ನು ಪೋಲೀಸ್ ಠಾಣೆಯಲ್ಲಿ ನೋಡಿದ್ದರೂ ಸಹ ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2ನೇ ಆರೋಪಿ ಪರವಾಗಿ ಶ್ರೀ ವಿ ವಿ ಎಸ್ ವಕೀಲರಿಂದಃ**

ಪೋಲೀಸರು ನನಗೆ ಮಹಜರ್‌ಗೆ ಬರಲು ಯಾವುದೇ ನೋಟೀಸ್ ಕೊಟ್ಟಿರಲಿಲ್ಲ.

**ಪಾಟೀ ಸವಾಲು 1,4, 5 ಮತ್ತು 6ನೇ ಆರೋಪಿತರ ಪರವಾಗಿ :**

ಏನೂ ಇಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು